DAB – 530

# ದ್ವಿತೀಯ ಬಿ.ಎ. ಪದವಿ ಪರೀಕ್ಷೆ, ಸೆಪ್ಟೆಂಬರ್/ಅಕ್ಟೋಬರ್ 2012
## ಅಂಚೆ ಮತ್ತು ತೆರಪಿನ ಶಿಕ್ಷಣ
## (ಹೊಸಬರಿಗೆ/ಹಳಬರಿಗೆ) (Directorate of Distance Education)
## ಬಸವ ತತ್ವ
## ಪತ್ರಿಕೆ - ೨ : ಬಸವ ತತ್ವ ಪ್ರದೀಪಿಕೆ

ಸಮಯ : 3 ಗಂಟೆಗಳು ಗರಿಷ್ಠ ಅಂಕಗಳು : 70/80

***ಸೂಚನೆಗಳು:*** *1) **30** ಅಂಕಗಳ ಆಂತರಿಕ ಪದ್ಧತಿಯಲ್ಲಿ ಬರೆದ ವಿದ್ಯಾರ್ಥಿಗಳು **70** ಅಂಕಗಳ ಪ್ರಶ್ನೆಗಳಿಗೆ ಉತ್ತರಿಸುವುದು.*

*2) **20** ಅಂಕಗಳ ಆಂತರಿಕ ಪದ್ಧತಿಯಲ್ಲಿ ಬರೆದ ವಿದ್ಯಾರ್ಥಿಗಳು **80** ಅಂಕಗಳ ಪ್ರಶ್ನೆಗಳಿಗೆ ಉತ್ತರಿಸುವುದು.*

*3) ವಿಶೇಷ ಸೂಚನೆ: ಹೊಸಬರು ಇ – ವಿಭಾಗದ ಪ್ರಶ್ನೆಯನ್ನು **ಕಡ್ಡಾಯವಾಗಿ** ಉತ್ತರಿಸಬೇಕು.*

### ವಿಭಾಗ - ಎ

I. ಯಾವುದಾದರೂ **ಎರಡು** ವಚನಗಳನ್ನು ವಿಶ್ಲೇಷಿಸಿ : **(2×5=10)**

ಅ) ಕಲ್ಲು ದೇವರು ದೇವರಲ್ಲ, ಮರದೇವರು ದೇವರಲ್ಲ
ಮಣ್ಣು ದೇವರು ದೇವರಲ್ಲ, ಕಂಚು ಹಿತ್ತಾಳೆ, ಪಂಚಲೋಹ
ಗಳಲ್ಲಿ ಮಾಡಿದ ದೇವರು ದೇವರಲ್ಲ.
ಸೇತು ಬಂದ ರಾಮೇಶ್ವರ ಗೋಕರ್ಣ
ಕಾಶಿ ಕೇದಾರ ಮೊದಲಾದ ಅಷ್ಟಾಷಷ್ಟಿ
ತೀರ್ಥಂಗಳು ಪುಣ್ಯ ಕ್ಷೇತ್ರಂಗಳಲ್ಲಿರುವ ದೇವರು ದೇವರಲ್ಲ,
ತನ್ನ ತಾನರಿತು ತಾನಾರೆಂದು ತಿಳಿದೊಡೆ ತಾನೇ ದೇವನೋಡಾ
ಅಪ್ರಮಾಣ ಕೂಡಲಸಂಗಮದೇವಾ.

ಆ) ಹಾವಿನ ಬಾಯ ಸಿಕ್ಕ ಕಪ್ಪೆ ಹಾರುವ ನೊಣಕ್ಕೆ ಆಸೆ ಮಾಡುವಂತೆ
ಶೂಲವನೇರಿದ ಕಳ್ಳರು ಹಾಲು ತುಪ್ಪವ ಕುಡಿದು
ಮೇಲೇಸು ಕಾಲ ಬದುಕುವನೋ ?
ಕೆಡುವ ಒಡಲ ನೆಚ್ಚಿ ಕಡು ಹುಸಿಯನೆ ಹುಸಿದು,
ಒಡಲ ಹೊರೆವವರ ಕೂಡಲಸಂಗಮದೇವನೊಲ್ಲ ಕಾಣಿರಣ್ಣಾ !

P.T.O.

ಇ) ನಂಬಿದ ಹೆಂಡತಿಗೆ ಗಂಡನೊಬ್ಬ ಕಾಣಿರೋ
ನಂಬಬಲ್ಲ ಭಕ್ತನಿಗೆ ದೇವನೊಬ್ಬ ಕಾಣಿರೋ
ಬೇಡ ಬೇಡ ಅನ್ಯ ದೈವ ಸಂಗ, ಅನ್ಯ ದೈವವೆಂಬುದು
ಹಾದರ ಕಾಣಿರೊ, ಕೂಡಲಸಂಗಮದೇವ ಕಂಡರೆ
ಮೂಗ ಕೊಯ್ವು ಕಾಣಿರೋ.

## ವಿಭಾಗ – ಬಿ

II. ಯಾವುದಾದರೂ **ಎರಡಕ್ಕೆ** ಉತ್ತರಿಸಿ : **(2×10=20)**

ಅ) ಜಂಗಮ ಎಂದರೆ ಯಾರು ? ಮತ್ತು ಕಾಯಕವನ್ನು ವಿವರಿಸಿ.

ಆ) ಕಾಯಕವಿಲ್ಲದವರು ಭಕ್ತರೇ ಅಲ್ಲವೆಂದು ಶರಣರು ಹೇಗೆ ಸಾರಿದ್ದಾರೆ ವಿವರಿಸಿ.

ಇ) ಶಿವಯೋಗವನ್ನು ಸಾಧಿಸಲು ಬೇಕಾದ ಅವಸ್ಥೆಗಳನ್ನು ವಿವರಿಸಿ.

## ವಿಭಾಗ – ಸಿ

III. ಯಾವುದಾದರೂ **ಎರಡು** ಸಂದರ್ಭಗಳ ಸರಳ ಆಚರಣೆಗಳನ್ನು ವಿವರಿಸಿ : **(2×5=10)**

ಅ) ಇಷ್ಟಲಿಂಗ ಯೋಗ ವಿಧಾನ (ಸಾಧಕರಿಗೆ)

ಆ) ಅಂತ್ಯಕ್ರಿಯೆ ವಿಧಾನ

ಇ) ಸ್ಮರಣೋತ್ಸವ.

## ವಿಭಾಗ – ಡಿ
## (ಬಯಲು)

IV. ಯಾವುದಾದರೂ **ಮೂರು** ಪ್ರಶ್ನೆಗಳಿಗೆ ಉತ್ತರಿಸಿ : **(3×10=30)**

ಅ) ಗುರು ಎಂದರೆ ಯಾರು ? ಸಂಕ್ಷಿಪ್ತವಾಗಿ ವಿವರಿಸಿ.

ಆ) ಸಮಾಜದ ಸರ್ವತೋಮುಖ ಬೆಳವಣಿಗೆಗೆ ಹಾಗೂ ಒಗ್ಗಟ್ಟಿಗೆ ಶಿವಾಚಾರ ದೀಕ್ಷೆಯಿಂದ ಹೇಗೆ ಸಾಧ್ಯ ವಿವರಿಸಿ.

ಇ) ಸದ್ಭಕ್ತನ ಲಕ್ಷಣಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

ಈ) ಸತ್ ಮಹೇಶ್ವರನ ಲಕ್ಷಣಗಳಾವುವು ?

## ವಿಭಾಗ – ಇ

**ವಿಶೇಷ ಸೂಚನೆ :** ಹೊಸಬರು ಈ ಪ್ರಶ್ನೆಯನ್ನು **ಕಡ್ಡಾಯ**ವಾಗಿ ಉತ್ತರಿಸಬೇಕು : **(1×10=10)**

ಅ) ಸಮಾನತೆಯ ಸಂಕೇತವಾಗಿ ವಿಶ್ವ ಕುಟುಂಬ ಭಾವನೆ ವಿಶ್ವ ಸಾಮರಸ್ಯವನ್ನು ಹೇಗೆ ಬೆಳೆಸುತ್ತದೆ ? ವಿವರಿಸಿ.

---